ಸಣ್ಣ ಕೈಗಾರಿಕೆ ಬೆಳೆಯಬೇಕೆಂದು ಖಾದಿ ಬೋರ್ಡ್ ಮುಖಾಂತರ 72ಕೋಟಿ ರೂಪಾಯಿ ಸಾಲವನ್ನು ಇವತ್ತು ಕೇಂದ್ರಸರ್ಕಾರದ ಸಹಾಯದಿಂದ ಕೊಡುತ್ತಿದ್ದೇವೆ. ಪ್ರತಿಯೊಂದು ಜಿಲ್ಲೆಗೆ 2-3-5 ಕೋಟಿ ರೂಪಾಯಿಯವರೆಗೆ ಕೊಟ್ಟಿದ್ದೇವೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಇವತ್ತು ಸೆಮಿನಾರ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಏಕೆಂದರೆ ಸಣ್ಣ ಕೈಗಾರಿಕೆ, ಗುಡಿ ಕೈಗಾರಿಕೆ ಗ್ರಾಮಾಂತರ ಪ್ರದೇಶದಲ್ಲಿ ಬೆಳೆಯಬೇಕು, ಉದ್ಯೋಗವಕಾಶ ಬೆಳೆಯಬೇಕು ಎನ್ನುವ ದೃಷ್ಟಿಯಿಂದ ಈ ಪ್ರಯತ್ನ ಮಾಡುತ್ತಿದ್ದೇನೆ. ತಾವು ಸಲಹೆ ಕೊಟ್ಟರೆ ಅದನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇವೆ. ಆದರೆ ತಾವು ದೊಡ್ಡ ಕೈಗಾರಿಕೆ, ಮಧ್ಯಮ ಕೈಗಾರಿಕೆ ಯಾವುದು ಬರಬಾರದು ಎಂದು ಹೇಳಿದರೆ ನಾನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಗರೀಕರ ಸಮಿತಿ ರಚನೆ.

30 - ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬೃಹತ್ ಕೈಗಾರಿಕೆಗಳ ಬಗ್ಗೆ ನಿರ್ಧರಿಸಲು ನಾಗರೀಕರ ಸಮಿತಿಯನ್ನು ರಚಿಸಲಾಗಿದೆಯೇ? ಹಾಗಿಲ್ಲದಿದ್ದಲ್ಲಿ ಕಾರಣವೇನು?

ಆ) ಈ ಬಗ್ಗೆ ಸರ್ಕಾರ ಆದೇಶವೇನಾದರೂ ಹೊರಡಿಸಿದೆಯೇ ಹೊರಡಿಸಿದ್ದಲ್ಲಿ ವಿವರ ನೀಡುವುದು?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಈ ರೀತಿ ಒಂದು ನಾಗರೀಕ ಸಮಿತಿಯನ್ನು ರಚಿಸಲು ಸರ್ಕಾರವು ಉದ್ದೇಶಿಸಿದ್ದು, ಈ ಬಗ್ಗೆ ಆದೇಶವನ್ನು ಸದ್ಯದಲ್ಲಿಯೇ ಹೊರಡಿಸಲಾಗುವುದು.

ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಉತ್ತರ ಒದಗಿಸಲಾಗಿದೆ. ಆ ಉತ್ತರ ಕೊಡುವಾಗ ಸಿಟಿಜನ್ ಕಮಿಟಿ ಫಾರಂ ಆಗಿರಲಿಲ್ಲ. ಈ ಕಮಿಟಿ ಈಗ ರಚನೆಯಾಗಿದ್ದು ನಾವು ಸರ್ಕಾರದಿಂದ ಆದೇಶ ಹೊರಡಿಸಿದ್ದೇವೆ.

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ಈ ನಾಗರೀಕ ಸಮಿತಿಯನ್ನು ನೇಮಕ ಮಾಡುವ ಉದ್ದೇಶ ಎಂ.ಆರ್.ಪಿ.ಎಲ್ ಕೊಳವೆ ಬಾವಿ ಹಾಕುವಾಗ ಸ್ಥಳೀಯರು ಮತ್ತು ಸರ್ಕಾರದ ಮಧ್ಯೆ ಪರಸ್ಪರ ಅರಿವು ಇಲ್ಲದೆ ಕೊನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಶಾಸಕರು ಮತ್ತು ಸ್ಥಳೀಯ ಮೀನುಗಾರರು ಮುಖಂಡರ ಸಭೆಯಲ್ಲಿ ನಾವು ಚರ್ಚೆ ಮಾಡಿದ್ದೇವೆ. ಇನ್ನು ಮುಂದೆ ಯಾವುದೇ ಕೈಗಾರಿಕೆಗೆ ಪರವಾನಗಿ ಕೊಡುವ ಮುನ್ನ ಈ ಸಮಿತಿಯ ಅಭಿಪ್ರಾಯ ತೆಗೆದುಕೊಳ್ಳಬೇಕೆಂದು ನಿರ್ಧರಿಸಲಾಗಿದೆ. ದಿ|| 29.12.85ಕ್ಕೆ ಸರ್ಕಾರಿ ಆದೇಶ ಪ್ರಕಾರ ಈ ಸಮಿತಿ ರಚನೆ ಮಾಡಬೇಕು ಎಂದು ಕೂಡ ಸರ್ಕಾರ ಆದೇಶ ಮಾಡಿದ್ದಲ್ಲದೆ ಇದೇ ಆದೇಶದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಧಾರಣ ಶಕ್ತಿ ಕ್ಯಾರಿಯಿಂಗ್ ಕೆಪಾಸಿಟಿಯನ್ನು ಅಧ್ಯಯನ ಮಾಡದೇ ಮುಂದಿನ ಬೃಹತ್ ಕೈಗಾರಿಕೆಗಳಿಗೆ ಪರವಾನಗಿ ನೀಡುವುದಿಲ್ಲ ಎಂದು ಸರ್ಕಾರ 29.12.95ಕ್ಕೆ ಸರ್ಕಾರಿ ಆದೇಶ ಮಾಡಿದ್ದರೂ ಕೂಡ

8.2.96ಕ್ಕೆ ಬ್ರಹ್ಮಾವರದಲ್ಲಿ ಉಷಾ ಇಸಪಾಟ್ ಕಾಪುನಲ್ಲಿ ನಾಗಾರ್ಜುನ ವಿದ್ಯುತ್ ಸ್ಥಾವರ, ಬೈಕಾಂಪಾಡಿಯಲ್ಲಿ ನಾಗಾರ್ಜುನ ಉಕ್ಕು ಸ್ಥಾವರಕ್ಕೆ ಅನುಮೋದನೆ ನೀಡಿದ್ದು ಸರಿಯೇ? ದಿನಾಂಕ 29.12.95ಕ್ಕೆ ಸರ್ಕಾರ ಆದೇಶ ಮಾಡಿದ್ದೀರಿ, ಆ ಸರ್ಕಾರಿ ಆದೇಶದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಧಾರುಣ ಶಕ್ತಿಯನ್ನು ಅಧ್ಯಯನ ಮಾಡಲು.

ಅಧ್ಯಕ್ಷರು : ಸಭಾಪತಿಯವರೇ, ನೀವೆಲ್ಲರೂ ಟ್ರೈನಿಂಗಗೆ ಬಂದಿದ್ದೀರಿ. ನನಗೆ ಬಹಳ ಬೇಸರವಾಗುತ್ತಿದೆ. ಹಿರಿಯ ಸದಸ್ಯರು ಹಾಗೆಯೇ ಮಾಡುತ್ತಿದ್ದಾರೆ. ಹೊಸ ಸದಸ್ಯರು ಹಾಗೆ ಮಾಡುತ್ತಿದ್ದಾರೆ. ಪ್ರಶ್ನೋತ್ತರ ಎಂದರೆ ಏನು? ಅದರ ಗಾಂಭೀರ್ಯ ಏನು? ಮಂತ್ರಿಗಳು ಹಾಗೆ ಮಾಡುತ್ತಾರೆ. ಹನ್ನೊಂದು ಕಾಲಿಗೆ ಪ್ರಾರಂಭವಾದ ಪ್ರಶ್ನೋತ್ತರ ಹನ್ನೆರಡುಕಾಲಿಗೆ ಮುಕ್ತಾಯವಾಗ ಬೇಕಾಗಿತ್ತು. ಈಗಾಗಲೇ 12.30 ಗಂಟೆ ಆಗಿದೆ. ನೀವು ನಾಗರೀಕ ಸಮತಿಯ ಬಗ್ಗೆ ಪ್ರಶ್ನೆ ಕೇಳುತ್ತೀರಿ, ನಾಗರೀಕ ಸಮಿತಿ ರಚನೆ ಇನ್ನೂ ಮಾಡಿಲ್ಲ; ಮಾಡುತ್ತೀರೋ ಎನ್ನುವುದರ ಬಗ್ಗೆ ಅದಕ್ಕೆ ಸಂಬಂಧಪಟ್ಟಂತೆ ಕೇಳಬೇಕು. ಹಾಗಾದರೆ ನಿಮ್ಮ ಪ್ರಕಾರ ಮಂತ್ರಿಗಳೇನು ದೈವಾಂಶ ಸಂಭೂತರೇ ಎಲ್ಲಾ ಕಂಪ್ಯೂಟರ್ ತರಹ ಕೇಳಿದ ತಕ್ಷಣ ಉತ್ತರ ಕೊಡುವುದಕ್ಕೆ.

ಶ್ರೀ ಯು.ಆರ್. ಸಭಾಪತಿ : ನಾನು ನಾಗರೀಕ ಸಮಿತಿಯ ಆಸ್ತಿತ್ವದ ಬಗ್ಗೆ ಕೇಳುತ್ತಿದ್ದೇನೆ.

ಅಧ್ಯಕ್ಷರು : ಒಬ್ಬೊಬ್ಬರು ಭಾಷಣಕ್ಕೆ ನಿಂತಬಿಟ್ಟರೆ ಪ್ರಶ್ನೋತ್ತರ ವೇಳೆಯಲ್ಲಿ ಎಲ್ಲರೂ ಭಾಷಣ ಮಾಡುತ್ತಾರೆ.

ಶ್ರೀ ಯು.ಆರ್. ಸಭಾಪತಿ : ನಾನು ಎರಡು ನಿಮಿಷ ಕೂಡ ಮಾತನಾಡಿಲ್ಲ. ಭಾಷಣ ಏನು ಮಾಡುವುದು. ಈ ನಾಗರೀಕ ಸಮಿತಿಯ ಮಾಡಿದ ಉದ್ದೇಶ ಏನಿದೆ ಅದರ ಉದ್ದೇಶ ಈಡೇರದೆ ಇನ್ನು ಎರಡು ಬೃಹತ್ ಕೈಗಾರಿಕೆಗಳಿಗೆ ಪರವಾನಗಿ ಕೊಟ್ಟಿದ್ದಾರಲ್ಲಾ, ಇದು ಸರಿಯೇ ಎಂದು ನನ್ನ ಪ್ರಶ್ನೆ.

ಅಧ್ಯಕ್ಷರು : ನಾನು ಮಂತ್ರಿಗಳಿಗೂ ವಿನಂತಿ ಮಾಡುವುದೇನೆಂದರೆ, ಇಲ್ಲಿಂದ ಈಚೆಗೆ ಸದಸ್ಯರು ಯಾವ ಪ್ರಶ್ನೆಯನ್ನು ಹಾಕಿರುತ್ತಾರೆ, ಆ ಪ್ರಶ್ನೆಯ ವ್ಯಾಪ್ತಿಯನ್ನು ಬಿಟ್ಟು ಬೇರೆ ಎಲ್ಲಾ ಕೇಳಿದಾಗ ನೀವು ನೋಟೀಸ್ ಕೇಳಬೇಕು. ನೀವು ಉತ್ತರ ಕೊಡುತ್ತಿದ್ದರೆ ಅವರು ಹೇಳುತ್ತಿರುತ್ತಾರೆ. ಒಂದು ಪ್ರಶ್ನೆಗೆ ಒಂದೊಂದು ಗಂಟೆ ಮಾಡಿದರೆ ಇನ್ನು ಮೇಲೆ ಇಡೀ ದಿವಸ ಬರೀ ಪ್ರಶ್ನೋತ್ತರವನ್ನು ಮಾಡಬೇಕಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, 22.2.96ರಂದು ನಾಗರೀಕ ಸಮಿತಿ ಈಗಾಗಲೇ ರಚನೆಯಾಗಿದೆ. ಮಾನ್ಯ ಸದಸ್ಯರು ನಾಗರೀಕ ಸಮಿತಿಯನ್ನು ಕೇಳಿ ಮೆಗಾ ಪ್ರಾಜೆಕ್ಟ ಕ್ಲಿಯರ್ ಮಾಡಿ ಎಂದು ಹೇಳಿದರು. ಸರ್ಕಾರದ ಆದೇಶಗಳು ಏನಿದೆ ಎಂದರೆ ಸರ್ಕಾರ ಇನ್ಸಟ್ರಕ್ಷನ್ ಏನಿದೆ, ಆ ಆದೇಶಗಳು, ಇನ್ಸ್‌ಟ್ರಕ್ಷನ್ಸ್ ಪ್ರಾಜೆಕ್ಟ್‌ನಲ್ಲಿ ಇಂಪ್ಲಿಮೆಂಟ್ ಆಗುತ್ತದೆಯೇ ಅಥವಾ ಇಲ್ಲವೇ ಇದನ್ನು ಅಧಿಕಾರಿಗಳ ಸಮಿತಿ ಮಾಡಿ ನೋಡಬೇಕು. ಪ್ರಾಜೆಕ್ಟ ಯಾವುದು ಕ್ಲಿಯರ್ ಮಾಡಬೇಕು ಎಂದು ನಾಗರೀಕ ಸಮಿತಿ ಹೇಳಿದ ಮೇಲೆ ಸರ್ಕಾರ ಏಕೆ ಇಡಬೇಕು. ಅವಶ್ಯಕತೆ ಇಲ್ಲ. ದಯಮಾಡಿ ಸಹಕರಿಸಬೇಕು.

ಶ್ರೀ ಯು.ಆರ್. ಸಭಾಪತಿ : ಸರ್ಕಾರಿ ಆದೇಶ 29 ರಲ್ಲಿ a study on carrying capacity

of the environment in the region will be made before clearing the projects in the district. ಎಂದು ಕೊಟ್ಟಿದ್ದೀರಲ್ಲಾ ಇದಕ್ಕೆ ಏನು ಅರ್ಥ?

ಶ್ರೀ ಆರ್. ವಿ. ದೇಶಪಾಂಡೆ : ತಾವು ಇದರ ಮೇಲೆ ಸಪರೇಟಾಗಿ ಪ್ರಶ್ನೆ ಹಾಕಿ ಉತ್ತರ ಕೊಡುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಗೆ ವಸತಿ ಯೋಜನೆಗೆ ಬಿಡುಗಡೆ ಮಾಡಿದ ಹಣ.

27 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ವಸತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) 1995-96ನೇ ಸಾಲಿಗೆ ದಕ್ಷಿಣ ಕನ್ನಡ ಜಿಲ್ಲೆಗೆ ಆಶ್ರಯ, ಅಂಬೇಡ್ಕರ್, ಇಂದಿರಾ ಆವಾಸ್ ಮನೆಗಳು ಮಂಜೂರಾಗಿವೆಯೇ. ಈ ಪೈಕಿ ಎಷ್ಟು ಹಣ ಬಿಡುಗಡೆ ಆಗಿದೆ. 1994-95ರಲ್ಲಿ ಬಿಡುಗಡೆ ಮಾಡಿದ ಹಣವೆಷ್ಟು. ಬರಬೇಕಾದ ಬಾಕಿ ಹಣವೆಷ್ಟು. ಉಡುಪಿ ತಾಲ್ಲೂಕಿಗೆ 1993-94, 1994-95ನೇ ಸಾಲಿನ ಆಶ್ರಯ ಇ, ಅಂಬೇಡ್ಕರ್ ಇಂದಿರಾ ಆವಾಸ್ ಮನೆಗಳಿಗೆ ಬರಬೇಕಾದ ಬಾಕಿ ಹಣವೆಷ್ಟು?

ಶ್ರೀ ಬಸವರಾಜ್ ರಾಯರೆಡ್ಡಿ (ವಸತಿ ರಾಜ್ಯ ಸಚಿವರು) :

1)

		ಆಶ್ರಯ	ಅಂಬೇಡ್ಕರ್	ಇಂದಿರಾ ಆವಾಸ್
1995-96	ಮಂಜೂರಾದ ಮನೆ	2800	1551	1330
	ಬಿಡುಗಡೆಯಾದ ಹಣ	430.00	221.00	94.00
1995-96	ಪ್ರಾರಂಭಿಸಿದ ಮನೆಗಳು	6409	1770 (ಹಿಂದಿನ ಮನೆಗಳು ಸೇರಿ)	484
1994-95	ಬಿಡುಗಡೆಯಾದ ಹಣ ಹಾಗೂ ಹಿಂದಿನ ಸಾಲಿನ ಉಳಿಕೆ ಹಣ ಸೇರಿ	653.49	153.59	80.00
	ಪ್ರಾರಂಭಿಸಿದ ಮನೆಗಳನ್ನು ಪೂರ್ಣಗೊಳಿಸಲು ಬಿಡುಗಡೆ ಮಾಡಬೇಕಾದ ಹಣ	307.00	111.91	-

ಉಡುಪಿ ತಾಲ್ಲೂಕಿಗೆ 93-94ನೇ 94-95ನೇ ಸಾಲಿಗೆ ಬಿಡುಗಡೆಯಾದ ಹಣ (ರೂ. ಲಕ್ಷಗಳಲ್ಲಿ)